ದಿ: 19.11.2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀಯುತ ಕೆ.ಆರ್.ಎ ವಕೀಲರಿಂದ.

13. ನಿಪಿ.25 ರಲ್ಲಿ ಖಾನೇಷುಮಾರಿ ಸಂಖ್ಯೆ 75 ರ ಪೂರ್ವಕ್ಕೆ ಸರ್ಕಾರಿ ರಸ್ತೆ ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ನಾನು ಪ್ರಸ್ತುತ ದಾವೆಯಲ್ಲಿ ಸಾಧನೆ ಮಾಡಿದಂತೆ ದಾವಾ ಆಸ್ತಿಯ ಪೂರ್ವಕ್ಕೆ ಯಾವುದೇ ಓಣಿ ಇರದ ಮೇರೆಗೆ ಕೇವಲ ಸರ್ಕಾರಿ ರಸ್ತೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸಾಕ್ಷಿಯು ರಸ್ತೆ ಮತ್ತು ಓಣಿ ಎರಡು ಒಂದೇ ಎಂದು ನುಡಿಯುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯು ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಖಾತೆಯು ನಿಮ್ಮ ತಂದೆ ಹೆಸರಿಗೆ ಬದಲಾವಣೆಯಾದ ದಾಖಲೆ ಆಗಿದ್ದು ಮತ್ತು ಸದರಿ ದಾಖಲೆಯಲ್ಲಿ ಪೂರ್ವಕ್ಕೆ ಸರ್ಕಾರಿ ರಸ್ತೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.೨ ಎಂದು ಗುರುತಿಸಲಾಯಿತು.

14. ಖಾನೇಷುಮಾರಿ ಸಂಖ್ಯೆ 75 ರ ಉತ್ತರ ದಿಕ್ಕಿನಲ್ಲಿರುವ ಚೆನ್ನಬಸಪ್ಪರವರ ಮೊಮ್ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಸದರಿ ಚೆನ್ನಬಸಪ್ಪ ರವರ ಮಗ ಶಿವಲಿಂಗಯ್ಯ ಎಂದರೆ ನನಗೆ ಗೊತ್ತಿಲ್ಲ. ಚೆನ್ನಬಸಪ್ಪರವರ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಖಾನೇಷುಮಾರಿ ಸಂಖ್ಯೆ 75 ರ ಉತ್ತರ ದಿಕ್ಕಿನಲ್ಲಿರುವ ಚೆನ್ನಬಸಪ್ಪರವರ ಮೊಮ್ಮಕ್ಕಳ ಹೆಸರು ಸೋಮಶೇಖರ್ ಮತ್ತು ಭರತ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಚೆನ್ನಬಸಪ್ಪರವರ ಆಸ್ತಿ ಅವರ ಮೊಮ್ಮಕ್ಕಳಾದ ಸೋಮಶೇಖರ್ ಮತ್ತು ಭರತ್ ರವರ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆನ್ನಬಸಪ್ಪರವರ ಮೊಮ್ಮಕ್ಕಳ ಹೆಸರಿಗೆ ಮಾಡಲಾಗಿರುವ ಖಾತೆಯಲ್ಲಿ ಚೆನ್ನಬಸಪ್ಪರವರ ಆಸ್ತಿಯ ಪೂರ್ವಕ್ಕೆ ರಸ್ತೆ ಎಂದು ಕಾಣಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ನಾನು ಸಾಧನೆ ಮಾಡುತ್ತಿರುವಂತೆ ಓಣಿ ಅಸ್ತಿತ್ವದಲ್ಲಿದ್ದರೆ ಚೆನ್ನಬಸಪ್ಪರವರ ಆಸ್ತಿಯ ಪೂರ್ವಕ್ಕೆ ಓಣಿ ಎಂದು ಕಾಣಿಸಲಾಗುತ್ತಿತ್ತು ಮತ್ತು ರಸ್ತೆ ಎಂದು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ಖಾನೇಷುಮಾರಿ ಸಂಖ್ಯೆ 75 ರ ದಕ್ಷಿಣ ದಿಕ್ಕಿನಲ್ಲಿರುವ ನಂಜಪ್ಪರವರ ಉಳಿಕೆ ಆಸ್ತಿಯ ಖಾತೆಯ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾನೇಷುಮಾರಿ ಸಂಖ್ಯೆ 75 ರ ದಕ್ಷಿಣ ದಿಕ್ಕಿನಲ್ಲಿರುವ ನಂಜಪ್ಪರವರ ಉಳಿಕೆ ಆಸ್ತಿಯ ಖಾತೆಯಲ್ಲಿಯೂ ರಸ್ತೆ ಎಂದು ನಮೂದಿಸಲಾಗಿರುತ್ತದೆ ಮತ್ತು ಯಾವುದೇ ಓಣಿಯ ಕುರಿತು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

15. ನಾನು ಸಾಧನೆ ಮಾಡುತ್ತಿರುವ ಇದೇ ಎಂದು ಹೇಳುವ ಓಣಿ ಎಲ್ಲಿಂದ ಎಲ್ಲಿಯವರೆಗೆ ಹಾದು ಹೋಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿಯು ಸ್ವಲ್ಪ ಸಮಯದ ನಂತರ ನನ್ನ ಅಣ್ಣನ ಮನೆಯ ಮುಂಭಾಗದಲ್ಲಿ ಓಣಿ ಹಾದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಮನೆ ನಿರ್ಮಿಸುವ ಪೂರ್ವದಲ್ಲಿ ಯಾವುದೇ ಕಟ್ಟಡ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆ ಕುರಿತು ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ.

16. ನನ್ನ ತಾಯಿಯ ಹೆಸರು ಚಿನ್ನಮ್ಮ ಎಂದರೆ ಸರಿ. 2013ನೇ ಸಾಲಿನಲ್ಲಿ ನನ್ನ ತಾಯಿ ಮನೆ ಕಟ್ಟುವ ಸಲುವಾಗಿ ಬಸವ ಕಲ್ಯಾಣ ಯೋಜನೆ ಅಡಿಯಲ್ಲಿ ಪಂಚಾಯ್ತಿಯಿಂದ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಿಮ್ಮ ತಾಯಿ ಪಂಚಾಯ್ತಿಯಿಂದ ಸಾಲ ಪಡೆದುಕೊಳ್ಳುವ ಸಮಯದಲ್ಲಿ ಕಟ್ಟಡ ಕಾಮಗಾರಿ ಪರವಾನಿಗೆಯನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ಚಿನ್ನಮ್ಮ ಗಂಡ ಚಿನ್ನಪ್ಪಯ್ಯ ರವರ ಹೆಸರಿನಲ್ಲಿ ನೀಡಲಾಗಿರುವ ಕಟ್ಟಡ ಕಾಮಗಾರಿ ಪರವಾನಿಗೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚಿನ್ನಮ್ಮ ಗಂಡ ಚಿನ್ನಪ್ಪಯ್ಯ ರವರ ಹೆಸರಿನಲ್ಲಿ ನೀಡಲಾಗಿರುವ ಕಟ್ಟಡ ಕಾಮಗಾರಿ ಪರವಾನಿಗೆಯಲ್ಲಿ ಖಾನೇಷುಮಾರಿ ಸಂಖ್ಯೆ 75ರ ಪಶ್ಚಿಮ ದಿಕ್ಕಿಗೆ ರಾಮಸ್ವಾಮಿ ಮನೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ.

17. ನನ್ನ ಅಣ್ಣ ಲಕ್ಷ್ಮಿ ನಾರಾಯಣ್ ರವರ ಹೆಂಡತಿಯ ಹೆಸರು ಮುನಿರತ್ನಮ್ಮ. 2013ನೇ ಸಾಲಿನಲ್ಲಿ ನನ್ನ ಅಣ್ಣನ ಹೆಂಡತಿ ಮನೆ ಕಟ್ಟುವ ಸಲುವಾಗಿ ಬಸವ ಕಲ್ಯಾಣ ಯೋಜನೆ ಅಡಿಯಲ್ಲಿ ಪಂಚಾಯ್ತಿಯಿಂದ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ನನ್ನ ಅಣ್ಣನ ಹೆಂಡತಿ ಖಾನೇಷುಮಾರಿ ಸಂಖ್ಯೆ 75ರಲ್ಲಿ ಮನೆ ನಿರ್ಮಿಸುವ ಸಲುವಾಗಿ ಪಂಚಾಯ್ತಿಯಿಂದ ಸಾಲ ಪಡೆದುಕೊಳ್ಳುವ ಪೂರ್ವದಲ್ಲಿ ಕಟ್ಟಡ ಕಾಮಗಾರಿ ಪರವಾನಿಗೆಯನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ನನ್ನ ಅಣ್ಣನ ಹೆಂಡತಿ ಮುನಿರತ್ನಮ್ಮ ರವರ ಹೆಸರಿನಲ್ಲಿ ನೀಡಲಾಗಿರುವ ಕಟ್ಟಡ ಕಾಮಗಾರಿ ಪರವಾನಿಗೆ ಎಂದರೆ ಸರಿಯಲ್ಲ. ಸದರಿ ನನ್ನ ಅಣ್ಣನ ಹೆಂಡತಿ ರವರ ಹೆಸರಿನಲ್ಲಿ ನೀಡಲಾಗಿರುವ ಕಟ್ಟಡ ಕಾಮಗಾರಿ ಪರವಾನಿಗೆಯಲ್ಲಿ ಖಾನೇಷುಮಾರಿ ಸಂಖ್ಯೆ 75ರ ಪೂರ್ವ ದಿಕ್ಕಿಗೆ ರಸ್ತೆ ಎಂದು ನಮೂದಿಸಲಾಗಿರುತ್ತದೆ ಮತ್ತು ಯಾವುದೇ ಓಣಿ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆ ಅಂಚಿನಿಂದ ಕೇವಲ 75 ಅಡಿ ವಿಸ್ತೀರ್ಣದ ಜಾಗ ಇರುವ ಮೇರೆಗೆ ಪೂರ್ವ ದಿಕ್ಕಿಗೆ ರಸ್ತೆ ಎಂದು ನಮೂದಿಸಲಾಗಿರುತ್ತದೆ ಮತ್ತು ಓಣಿ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯ ಅಂಚಿನಿಂದ ಪಶ್ಚಿಮ ದಿಕ್ಕಿಗೆ ಇರುವ 75 ಅಡಿ ಆಸ್ತಿ ಮಾತ್ರ ನಮ್ಮದಾಗಿರುತ್ತದೆ ಮತ್ತು ಸದರಿ 75 ಅಡಿ ವಿಸ್ತೀರ್ಣದ ನಂತರದ ಜಮೀನು ನಂಜಪ್ಪರವರಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಳತೆಯ ಕುರಿತು ನ್ಯಾಯಾಲಯದ ಆಯುಕ್ತರನ್ನು ನೇಮಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

18. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ಯಾರದ್ದು ಎಂದು ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ ಮತ್ತು ಸದರಿ ಸಹಿಯನ್ನು ನಂದಗುಡಿ ಪೊ.ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ನಂದಗುಡಿ ಪೊ.ಠಾಣೆಯಲ್ಲಿ ನನಗೆ ಕೇವಲ ಪೂರ್ವ ಪಶ್ಚಿಮ 25 ಅಡಿ ಮತ್ತು ಉತ್ತರ ದಕ್ಷಿಣ 20 ಅಡಿ ಆಸ್ತಿ ಮಾತ್ರ ಇರುತ್ತದೆ ಎಂದು ಹೇಳಿಕೆ ನೀಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಂದಗುಡಿ ಪೊ.ಠಾಣೆಯಲ್ಲಿ ಹೇಳಿಕೆ ನೀಡಿ ದಾವೆಯನ್ನು ವಾಪಸ್ಸು ಪಡೆದುಕೊಳ್ಳುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸಾಕ್ಷಿಯು ಹೇಳಿಕೆ ನೀಡಿರುತ್ತೇನೆ ಮತ್ತು ಸದರಿ ಪೊ.ಠಾಣೆಯಲ್ಲಿ ನನ್ನ ಮತ್ತು ಪ್ರತಿವಾದಿಗಳ ದಾಖಲೆಗಳನ್ನು ತರುವಂತೆ ತಿಳಿಸಿದ್ದು ಮತ್ತು ನಾವುಗಳು ದಾಖಲೆಗಳನ್ನು ಹಾಜರುಪಡಿಸಿದ ನಂತರ ಪೊಲೀಸರು ಪ್ರತಿವಾದಿಯ ದಾಖಲೆಗಳನ್ನು ಫೋರ್ಜರಿ ಮಾಡಿಕೊಂಡು ತಂದಿರುತ್ತೀಯಾ ಎಂದು ಬಿಸಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೊ.ಠಾಣೆಯಲ್ಲಿ ನೀಡಿದ್ದೆ ಎಂದು ಹೇಳುವ ಹೇಳಿಕೆ ಈಗ ನನಗೆ ತೋರಿಸಿದ ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ನಾನು ನೀಡಿರುವ ಹೇಳಿಕೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ನನಗೆ ತೋರಿಸಿದ ಹೇಳಿಕೆಯಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

19. ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ಚಿಕ್ಕಬೈರಪ್ಪರವರ ಮಗನ ಹೆಸರು ನಂಜುಂಡಪ್ಪ ಎಂದರೆ ಸರಿ. ಸದರಿ ನಂಜುಂಡಪ್ಪರವರ ಮನೆಗೆ ಹೋಗಲು ಯಾವುದೇ ರಸ್ತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ನಂಜುಂಡಪ್ಪರವರ ಮನೆಗೆ ಹೋಗಲು ಯಾವುದೇ ರಸ್ತೆ ಇರದ ಮೇರೆಗೆ ನಂಜುಂಡಪ್ಪರವರು ಖಾನೇಷುಮಾರಿ ಸಂಖ್ಯೆ 75 ರಲ್ಲಿ ರಸ್ತೆ ಬಿಟ್ಟುಕೊಡುವಂತೆ ರಾಮಸ್ವಾಮಿ, ಗೌರಮ್ಮ , ಮುನಿಯಪ್ಪ ಮತ್ತು ಹರೀಶ್ ರವರ ವಿರುದ್ಧ ಮೂಲ ದಾವೆ ಸಂಖ್ಯೆ 2-2004 ರಂತೆ ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೂಲ ದಾವೆ ಸಂಖ್ಯೆ 2-2004 ದಾವೆಯನ್ನು ರಾಜಿ ಮೂಲಕ ಮುಕ್ತಾಯಗೊಳಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

20. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ಬಿಳಿ ಬಣ್ಣದ ಗೋಡೆ ಗೌರಮ್ಮರವರ ಮನೆ ಆಗಿರುತ್ತದೆ ಮತ್ತು ಎದುರಿನ ಕಾಂಪೌಂಡ ಗೋಡೆ ನಂಜುಂಡಪ್ಪರವರ ಮನೆ ಆಗಿರುತ್ತದೆ ಎಂದರೆ ಸರಿ. ಸದರಿ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಡಿ.3 ಎಂದು ಗುರುತಿಸಲಾಯಿತು. ನಿ.ಡಿ.3 ರಲ್ಲಿ ಕಾಣುತ್ತಿರುವ ರಸ್ತೆಯ ಕುರಿತು ನಂಜುಂಡಪ್ಪರವರು ಮೂಲ ದಾವೆ ಸಂಖ್ಯೆ 2-2004 ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ನಿ.ಡಿ.2 ರಲ್ಲಿ ಕಾಣುತ್ತಿರುವ ಕೊಳವೆ ಬಾವಿ ರಾಮಸ್ವಾಮಿರವರ ಅಕ್ಕನಾದ ಗೌರಮ್ಮರವರಿಗೆ ಸೇರಿದ ಕೊಳವೆ ಬಾವಿ ಆಗಿರುತ್ತದೆ ಎಂದರೆ ಸರಿ. ನಿ.ಡಿ.2 ರಲ್ಲಿ ಕಾಣುತ್ತಿರುವ ತೆಂಗಿನ ಮರ ನಮ್ಮದಾಗಿರುತ್ತದೆ. ಮೂಲ ದಾವೆ ಸಂಖ್ಯೆ 2-2004 ರ ರಾಜಿ ಪತ್ರದಲ್ಲಿ ನಿ.ಡಿ.2 ರಲ್ಲಿ ಕಾಣುತ್ತಿರುವ ಕೊಳವೆ ಬಾವಿ ಮತ್ತು ತೆಂಗಿನ ಮರ ನಂಜಪ್ಪರವರಿಗೆ ಸೇರಿದವು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.2 ರಲ್ಲಿ ಕಾಣುತ್ತಿರುವ ಖಾಲಿ ಜಾಗ , ಕೊಳವೆ ಬಾವಿ ಮತ್ತು ತೆಂಗಿನ ಮರ ನಂಜಪ್ಪರವರಿಗೆ ಸೇರಿದ್ದಾಗಿದ್ದು ಮತ್ತು ನಂಜಪ್ಪರವರು ಸದರಿ ಖಾಲಿ ಜಾಗದಲ್ಲಿ ರಸ್ತೆಯನ್ನು ಬಿಟ್ಟುಕೊಡುವಂತೆ ದಾವೆ ದಾಖಲಿಸಿದ್ದರು ಎಂದರೆ ಸರಿಯಲ್ಲ. ನಿ.ಡಿ.2 ರಲ್ಲಿ ಕಾಣುತ್ತಿರುವ ಕೊಳವೆ ಬಾವಿ , ತೆಂಗಿನ ಮರ ಮತ್ತು ಖಾಲಿ ಜಾಗ ನಂಜಪ್ಪರವರಿಗೆ ಸೇರಿದ್ದು ಮತ್ತು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

21. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ರಸ್ತೆ ಕೋಲಾರ ರಾಷ್ಟ್ರೀಯ ಹೆದ್ದಾರಿಯಿಂದ ನಮ್ಮ ಊರಿಗೆ ಹೋಗುವ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.4 ಎಂದು ಗುರುತಿಸಲಾಯಿತು. ನಿ.ಡಿ.4 ರಲ್ಲಿ ಓಣಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಓಣಿಯನ್ನು ಸಮತಟ್ಟು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಓಣಿಯನ್ನು ಸಮತಟ್ಟು ಮಾಡಿ ರಸ್ತೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

22. ಪ್ರತಿವಾದಿಗಳು ನಾನು ಮನೆ ಕಟ್ಟಲು ಹೋದಾಗ ತೊಂದರೆ ನೀಡಿದ್ದರು ಎಂದು ಹೇಳುವ ದಿನಾಂಕ, ತಿಂಗಳು ವರ್ಷ ಮತ್ತು ಸಮಯ ನನಗೆ ಹೇಳಲು ಬರುವುದಿಲ್ಲ. ನಾನು ರಾಮಸ್ವಾಮಿರವರ ವಿರುದ್ಧ ಸುಳ್ಳು ದಾವೆ ದಾಖಲಿಸುವ ಸಲುವಾಗಿ ಸುಳ್ಳು ವ್ಯಾಜ್ಯ ಕಾರಣವನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಲು ಹೋದಾಗ ರಾಮಸ್ವಾಮಿರವರು ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಮತ್ತು ನಾನು ಸ್ವತ: ರಾಮಸ್ವಾಮಿರವರಿಗೆ ಸಂಬಂಧಿಸಿದ ಜಾಗವನ್ನು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿ ಮನೆ ನಿರ್ಮಿಸಲು ಹೋದ ಮೇರೆಗೆ ನನ್ನ ವಿರುದ್ಧ ಪ್ರತ್ಯೇಕ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವಲ್ಪ ಸಮಯದ ನಂತರ ಸರಿಯಲ್ಲ ಎಂದು ನುಡಿಯುತ್ತಾರೆ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.